## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 945

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 27.12.2022

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆಯ ಕೆ.ಜಿ.ಎಫ್ ತಾಲ್ಲೂಕಿನ ಬಂಗಾರದ ಗಣಿ ಗ್ರಾಮದಲ್ಲಿ ಬಿಜಿಎಂಎಲ್ ಸಂಸ್ಥೆಯು ಬಳಕೆ ಮಾಡದಿರುವ ಒಟ್ಟು 967-00 ಎಕರೆ ಜಮೀನಿನಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕಾರ್ಯಾರಂಭಗೊಳಿಸ ಲಾಗುವುದು; | **1) BGML land, KGF:**<br>ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ದಿನಾಂಕ: 28.04.2022ರ ಪತ್ರದಲ್ಲಿ BGML ಭೂಮಿಯ ಸಂಬಂಧ ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಹಾಗೂ ಗಣಿ ಸಚಿವರಿಗೆ ಈ ಕೆಳಕಂಡಂತೆ ಪ್ರಸ್ತಾವನೆಯನ್ನು / ಮನವಿಯನ್ನು ಸಲ್ಲಿಸಿರುತ್ತಾರೆ:<br>(i) Phase-I: Transfer of around 2365 acres of clear / unencumbered / vacant land to GoK for development of Industrial Township<br>(1365 acres of clear land without encroachment at Bytarayaswamy block and 1000 acres of land at Bangaradagani village – No-Go area).<br>(ii) Phase-II: Transfer of balance land with BGML to GoK, auctioning of ore tailing dumps and extraction of gold etc.<br>ಸದರಿ ಪ್ರಸ್ತಾವನೆ / ಮನವಿಯು ಭಾರತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br>**2) BEML land, KGF:**<br>ಕೆ.ಜಿ.ಎಫ್ ತಾಲ್ಲೂಕು, ಬಂಗಾರದ ಗಣಿ ಗ್ರಾಮದಲ್ಲಿ ರಾಜ್ಯ ಸರ್ಕಾರವು BEML ಕಾರ್ಖಾನೆ ಸ್ಥಾಪಿಸಲು ನೀಡಿರುವ ಒಟ್ಟು 1870-30 ಎಕರೆ ಜಮೀನಿನ ಪೈಕಿ, BEML ಸಂಸ್ಥೆಯು ತನ್ನ ಉದ್ದೇಶಿತ ಚಟುವಟಿಕೆಗೆ ಜಮೀನು ಉಪಯೋಗಿಸಿಕೊಂಡು, ಬಾಕಿ ಉಳಿದಿರುವ 971-33 ಎಕರೆ ಜಮೀನನ್ನು ಕರ್ನಾಟಕ ಭೂಮಂಜೂರಾತಿ ನಿಯಮಗಳನ್ವಯ ಎಲ್ಲಾ ಋಣಭಾರಗಳಿಂದ ಮುಕ್ತಗೊಳಿಸಿ, ಕಂದಾಯ ಇಲಾಖೆಗೆ ವಾಪಸ್ ಪಡೆಯಲು ದಿನಾಂಕ: 12.11.2020 ರಂದು ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರು ಆದೇಶ ಹೊರಡಿಸಿರುತ್ತಾರೆ. |
| ಆ | ಕೈಗಾರಿಕಾ ಟೌನ್‌ಶಿಪ್ ಬದಲಾಗಿ ಆಧುನಿಕ ಜವಳಿ ಪಾರ್ಕ್‌ನ್ನು ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ; | |
| ಇ | ಬಂಗಾರದ ಗಣಿ ಗ್ರಾಮದ 967-00 ಎಕರೆ ಜಮೀನಿನಲ್ಲಿ ಕೈಗಾರಿಕಾ ಟೌನ್‌ಶಿಪ್ ಅಥವಾ ಜವಳಿ ಪಾರ್ಕ್ ನಿರ್ಮಾಣ ಮಾಡಲು ಭೂಮಿಯನ್ನು ಹಸ್ತಾಂತರಿಸಲು ಈಗಾಗಲೇ ಜಿಲ್ಲಾಡಳಿತವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ 2 ವರ್ಷ ಕಳೆದಿದ್ದರೂ ಈ ಬಗ್ಗೆ ಸರ್ಕಾರವು ಯಾವುದೇ ಕ್ರಮವನ್ನು ಕೈಗೊಳ್ಳದಿರಲು ಕಾರಣವೇನು? | |

| | | |
|---|---|---|
| | | ಕೆ.ಜಿ.ಎಫ್ ಪ್ರದೇಶದಲ್ಲಿ ಕೈಗಾರಿಕಾ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಹಾಗೂ ಸದರಿ ಜಮೀನನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಲು ಜರೂರಾಗಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ BEML ಸಂಸ್ಥೆಗೆ ಸೇರಿದ 971-33 ಎಕರೆ ಸರ್ಕಾರಿ ಜಮೀನನ್ನು ಕೈಗಾರಿಕಾ ಟೌನ್.ಷಿಪ್ ಅಭಿವೃದ್ಧಿಪಡಿಸುವ ಸಲುವಾಗಿ ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ, ಹಸ್ತಾಂತರಿಸುವಂತೆ ದಿನಾಂಕ: 04.03.2021, 11.08.2021, ಮತ್ತು 09.12.2021 ರಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಕಂದಾಯ ಇಲಾಖೆಯನ್ನು ಕೋರಿ ಪತ್ರಗಳನ್ನು ಬರೆಯಲಾಗಿದೆ.<br><br>ಕಂದಾಯ ಇಲಾಖೆಯು ಇದುವರೆವಿಗೂ ಈ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿರುವುದಿಲ್ಲ. |

ಸಿಐ 413 ಎಸ್‌ಪಿಐ 2022

(ಡಾ. ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು